ದೇವರ ರಾಜ್ಯದ

# ಶುಭವಾರ್ತೆ

"ಎಲ್ಲವನ್ನೂ ಪರಿಶೋಧಿಸಿ ಒಳ್ಳೆಯದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ"
(1 ಥೆಸಲೋನಿಕ 5:21)

ಕ್ರಿಸ್ಟಡೆಲ್ಫಿಯನ್ನರ ಸತ್ಯವೇದದ ಸತ್ಯಪ್ರಚಾರ ಪತ್ರಿಕೆ

50

# ಯೇಸುಕ್ರಿಸ್ತನು ಯಾರು? - 4

## ಶಿಲುಬೆಯ ಮೇಲೆ ಆತನ ಮರಣ :

ಕರ್ತನಾದ ಯೇಸುವಿನ ಪ್ರಕೃತಿಯ ಬಗ್ಗೆ ಸಾಮಾನ್ಯ ಅಭಿಪ್ರಾಯ ಹೊಂದಿರುವವರಿಗೆ ಆತನ ಮರಣವು ಮತ್ತೊಂದು ಸಮಸ್ಯೆಯನ್ನು ತಂದೊಡ್ಡುವುದು. ಅದೇನೆಂದರೆ, ದೇವರು ಸಾಯಲು ಸಾಧ್ಯವಿಲ್ಲವೆಂದು ಸತ್ಯವೇದವು ಹೇಳುತ್ತದೆ. "ಆತನು ಶಾಶ್ವತ ಜೀವವುಳ್ಳವನು" (ದಾನಿಯೇಲ 12:7), "ತಾನೊಬ್ಬನೇ ಅಮರತ್ವವುಳ್ಳವನು...." (1 ತಿಮೋಥೆ 6:16). ದೇವದೂತರೂ ಸಹ ಸಾಯುವಂಥಹವರಲ್ಲ. (ಮತ್ತಾಯ 22:30).

ಆದರೂ ಸಹ, ಯೇಸುವು ಶಿಲುಬೆಯ ಮೇಲೆ ಸತ್ತನು ಎಂದು ಎಲ್ಲರಿಗೂ ಗೊತ್ತಿದೆ. ಇದಕ್ಕೂ ಒಂದು ಉತ್ತರವಿದೆಯೆಂದು ಕೆಲವು ಜನರು ಆಲೋಚಿಸುತ್ತಾರೆ. "ಹೌದು, ಆದರೆ ಅವನ ಶರೀರ ಮಾತ್ರ ಸತ್ತಿತು. ಶರೀರದೊಳಗಿದ್ದ ಆತ್ಮೀಕವಾದದ್ದು ಬದುಕಿಯೇ ಇತ್ತು." ಎಂದು ಅವರು ಹೇಳುತ್ತಾರೆ.

ಇದು ಆಗದು. ಸತ್ತಿದ್ದು ಯೇಸುವಿನ ಶರೀರ ಮಾತ್ರವಲ್ಲ ಎಂದು ಸತ್ಯವೇದವು ಹೇಳುತ್ತದೆ. "ತನ್ನ ಪ್ರಾಣವನ್ನು ಧಾರೆಯೆರೆದು ಮರಣ ಹೊಂದಿದನು. (ಯೆಶಾಯ 53:12) ಇದಲ್ಲದೆ, ನಮ್ಮ ಹಾಗೆಯೇ ಯೇಸುವೂ ಸಹ ಮರಣಕ್ಕೆ ಹೆದರಿದ್ದನು ಎಂದು ಸತ್ಯವೇದವು ಹೇಳುತ್ತದೆ. ನಮ್ಮಂತೆಯೇ ಮರಣವು ಆತನಿಗೆ ಒಂದು ಭಯಾನಕ ಹೊರೆಯಾಗಿತ್ತು. "ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ, ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯ ಭಕ್ತಿಯ ನಿಮಿತ್ತ ಕೇಳಲ್ಪಟ್ಟನು." (ಇಬ್ರಿಯ 5:7).

ಯೇಸುವು ಮಾನವ ರೂಪದಲ್ಲಿದ್ದ ದೇವರಾಗಲೀ ಇಲ್ಲವೇ ಒಬ್ಬ ದೇವದೂತನಾಗಲೀ ಆಗಿರಲಿಲ್ಲವೆಂಬುದಕ್ಕೆ ಇದೂ ಸಹ ಬಲವಾದ ಸಾಕ್ಷ್ಯವಾಗಿದೆ. ಅಂತಹ ವ್ಯಕ್ತಿಯಾಗಿದ್ದಲ್ಲಿ, ತಾತ್ಕಾಲಿಕವಾದ ಮಾನವ ಶರೀರವನ್ನು ಕಳೆದುಕೊಳ್ಳುತ್ತೇನೆಂಬ ಆಲೋಚನೆಯಿಂದ ಮಾನಸಿಕ ವೇದನೆಯನ್ನು ಅನುಭವಿಸುತ್ತಾನೆಯೇ? ನಿಶ್ಚಯವಾಗಿಯೂ ಒಬ್ಬ ನಿಜವಾದ ಮಾನವನು, ನಿಜವಾಗಿಯೂ ಸಾಯಲಿರುವವನು ಮಾತ್ರ, ಮರಣದ ಬಗ್ಗೆ ಈ ರೀತಿಯಾಗಿ ವೇದನೆ ಅನುಭವಿಸಲು ಸಾಧ್ಯವಿರುತ್ತೆ.

## ಏಕೆ ಯೇಸುವು ದೇವರ ಬಲಗಡೆಯಲ್ಲಿದ್ದಾನೆ?

ಈಗ ಯೇಸುವು ದೇವರ ಬಲಗಡೆಯಲ್ಲಿ ಆಸೀನನಾಗಿದ್ದಾನೆ "ಯೆಹೋವನು ನನ್ನ ಒಡೆಯನಿಗೆ–ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗಿ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ನುಡಿದನು" (ಕೀರ್ತನೆ 110:1; ಇಬ್ರಿಯ 1:13). ಈ ವಚನಗಳಲ್ಲಿ ಹಾಗೂ ಇತರೆ ರೀತಿಗಳಲ್ಲಿ ಯೇಸುವು ಎಷ್ಟು ಮಹಾನ್ ವ್ಯಕ್ತಿಯೆಂದು ಸತ್ಯವೇದವು ನಮಗೆ ತಿಳಿಸುತ್ತದೆ. ಬಹುಶಃ ಈಗ ನಾವು ಈ ಪ್ರಶ್ನೆಯನ್ನು ಕೇಳುವವರಾಗಿದ್ದಲ್ಲಿ, "ಏಕೆ ಇದು? ಏಕೆ ಯೇಸುವು ಅಂತಹ ಮಹಾನ್ ವ್ಯಕ್ತಿಯಾಗಿದ್ದಾನೆ? ಏಕೆ ದೇವರು ಆತನಿಗೆ ಅಂತಹ ಉನ್ನತ ಸ್ಥಾನವನ್ನು ನೀಡಿದ್ದಾನೆ?" ಯೇಸುವನ್ನು ದೇವರೆಂದೂ ಇಲ್ಲವೇ ಒಬ್ಬ ದೇವದೂತನೆಂದೂ ನಂಬುವಂತವರು ಒಂದು ಸರಳ ಉತ್ತರವನ್ನು ಹೇಳುತ್ತಾರೆ. ಅವರು "ಯೇಸುವು ಎಂದೆಂದೂ ಮಹಾನ್ ವ್ಯಕ್ತಿಯಾಗಿರುವುದರಿಂದ; ಈ ಲೋಕಕ್ಕೆ ಬರುವ ಮುನ್ನ ಆತನು ಪರಲೋಕದಲ್ಲಿ ಒಂದು ಮಹಾ ಆತ್ಮೀಕ ವ್ಯಕ್ತಿಯಾಗಿದ್ದನು. ನಂತರ ಆತನು ತಾನಿದ್ದ ಸ್ಥಳಕ್ಕೆ ಹಿಂದಿರುಗಿದನು. ಅವನು ಬಂದಂತ ಉನ್ನತ ಸ್ಥಾಳಕ್ಕೆ ಹಿಂದಿರುಗಿ ಹೋದನು.

ಆದರೆ ಇದು ಸತ್ಯವೇದದ ಉತ್ತರವಲ್ಲ. ಯೇಸುವು ಈ ಲೋಕದ ಜೀವಿತವನ್ನು ಮುಗಿಸಿದ ನಂತರ ಮಹಾನ್ ವ್ಯಕ್ತಿಯಾದನು ಎಂದು ಸತ್ಯವೇದವು ಹೇಳುತ್ತದೆ. ದೇವರು ಆತನನ್ನು ಉನ್ನತ ಸ್ಥಾನಕ್ಕೆ ಏರಿಸಿದ್ದರಿಂದ ಆತನು ಆಗ ಮಹಾನ್ ವ್ಯಕ್ತಿಯಾದನೆಂದು ಸತ್ಯವೇದವು ತಿಳಿಸುತ್ತದೆ. ಯೇಸುವು ಈ ಲೋಕದಲ್ಲಿ ಮಾಡಿದ ಕಾರ್ಯಗಳಿಂದಾಗಿ ಆತನು ಉನ್ನತ ಸ್ಥಾನವನ್ನು ಹೊಂದಲರ್ಹನಾದ್ದರಿಂದ, ದೇವರು ಆತನನ್ನು ಉನ್ನತ ಸ್ಥಾನಕ್ಕೆ ಏರಿಸಿದನು ಎಂಬುದಾಗಿ ಸತ್ಯವೇದವು ಆಗಿಂದಾಗ್ಗೆ ನಮಗೆ ತಿಳಿಸುತ್ತದೆ.

"ಆದರೂ ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟ ಒಬ್ಬಾತನು, ಅಂದರೆ ಯೇಸುವು, ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಹೊಂದಿರುವುದನ್ನು ನಾವು ನೋಡುತ್ತೇವೆ. ಮೃತಪಟ್ಟದ್ದರಿಂದಲೇ ಮಾನ ಪ್ರಭಾವಗಳನ್ನು ಹೊಂದಿದನು. ಆತನು ದೇವರ ಕೃಪೆಯಿಂದ "ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು." (ಇಬ್ರಿಯ 2:9). "ಅವನು (ಯೇಸುವು) ನನ್ನಲ್ಲಿ (ದೇವರಲ್ಲಿ) ಆಸಕ್ತನಾಗಿರುವುದರಿಂದ ಅವನನ್ನು ರಕ್ಷಿಸುವೆನು; ನನ್ನ ನಾಮವನ್ನು ಅರಿತವನಾಗಿರುವುದರಿಂದ ಅವನನ್ನು ಉದ್ಧರಿಸುವೆನು" (ಕೀರ್ತನೆ 91:14). "ನೀನು (ಯೇಸುವು) ಧರ್ಮವನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ; ಆದುದರಿಂದ

ದೇವರು, ನಿನ್ನ ದೇವರೇ, ನಿನ್ನನ್ನು ನಿನ್ನ ಜೊತೆಗಾರರಿಗಿಂತ ಉನ್ನತ ಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿದ್ದಾನೆ." (ಕೀರ್ತನೆ 45:7). "ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದು ವಷ್ಟು ವಿಧೇಯನಾದನು. ಈ ಕಾರಣದಿಂದಲೇ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿದನು." (ಫಿಲಿಪ್ಪಿ 3:8).

ಯೇಸುವು ನಿಜವಾದ ಒಬ್ಬ ಮಾನವನಾಗಿದ್ದಾನೆ ಎಂಬುದಕ್ಕೆ ನಿಶ್ಚಯ ನಾಗಿಯೂ ಇದು ಅಂತಿಮವಾದ ಹಾಗೂ ನಿರ್ಣಾಯಕ ಸಾಕ್ಷ್ಯವಾಗಿರುತ್ತೆ. ಮಾನವ ಶೋಧನೆಯನ್ನು ಸಂಪೂರ್ಣವಾಗಿ ಜಯಿಸಿದ ಮಾನವನು ಆತನೇ ಆಗಿದ್ದಾನೆ. ಆದ್ದರಿಂದಲೇ ಆತನು ಈಗ ದೇವರ ಬಲಗಡೆಯಲ್ಲಿ ಆಸೀನನಾಗಿದ್ದಾನೆ.

## ವಿಷಯಗಳನ್ನು ದೇವರ ದೃಷ್ಟಿಯಲ್ಲಿ ನೋಡುವುದು

ಪ್ರಾರಂಭದ ಲೇಖನದಲ್ಲಿ "ನಾನು ಪರಲೋಕದಿಂದ ಇಳಿದು ಬಂದೆನು" ಎಂಬ ಯೇಸುವಿನ ಮಾತುಗಳ ಬಗ್ಗೆ ನೋಡಿದೆವು. ನಮ್ಮ ಸುತ್ತ ಮುತ್ತಲಿರುವ ಎಲ್ಲಾ ಒಳ್ಳೆಯ ಆಶೀರ್ವಾದಗಳು ಮೇಲಣ ಪರಲೋಕದಿಂದ ಕಳುಹಿಸಲ್ಪಟ್ಟವು" ಎಂಬ ಸತ್ಯವೇದ ಆಧಾರಿತ ಸಂಗೀತದ ಮಾತುಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಯೇಸುವಿನ ಈ ಮಾತುಗಳು ಸಾಂಕೇತಿಕವಾದವುಗಳೆಂದೂ ಅಕ್ಷರಶಃವಲ್ಲವೆಂದೂ ನಾವು ನೋಡಿದೆವು.

ಈಗ ನಾವು ಇನ್ನೂ ಹೆಚ್ಚಿನ ನಿಶ್ಚಿತವಾದ ನಿರ್ಣಯಕ್ಕೆ ಬರಬಹುದಾಗಿದೆ. ಇಲ್ಲಿಯ ತನಕ ನಾವು ನೋಡಿದ ಸತ್ಯವೇದದ ಸರಳ ಬೋಧನೆಯಿಂದ, ಯೇಸುವು ನಿಜವಾದ ಮಾನವನಾಗಿದ್ದನು ಎಂದು ನಮಗೆ ನಿಶ್ಚಿತವಾಯಿತು. ಹಾಗಿದ್ದಲ್ಲಿ, 'ಪರಲೋಕದಿಂದ ಇಳಿದು ಬರುವುದು' ಎಂಬ ಆತನ ಮಾತುಗಳು, ಸಾಂಕೇತಿಕವಾದವು ಗಳೆಂಬುದನ್ನು ಸರಳವಾಗಿ ತಿಳಿಯಬಹುದಾಗಿದೆ. ಈಗ ಅದು ನಿಜನೆಂದು ನಮಗೆ ಅರಿವಾಗಿದೆ. ಪರಲೋಕದ ದೇವರು ಈ ಲೋಕವನ್ನು ಮುಟ್ಟಿ, ಯೇಸುವಿನ ತಾಯಿಯಾದ ಮರಿಯಳಲ್ಲಿ ಒಂದು ಅದ್ಭುತವಾದ ಕಾರ್ಯವನ್ನು ಮಾಡಿದಾಗ ತನ್ನ ಜೀವಿತವು ಪ್ರಾರಂಭವಾಯಿತು ಎಂದು ಯೇಸುವು ಅರ್ಥಮಾಡಿಕೊಂಡಿದ್ದನು. ಇದು ಇನ್ನು ಅನೇಕ ಸಮಸ್ಯೆಯ ವಚನಗಳಿಗೆ ಎಡೆಕೊಟ್ಟಿದೆ ಉದಾಹರಣೆಗೆ, ಯೋಹಾನ 17:5 ರಲ್ಲಿ "ಲೋಕ ಉಂಟಾಗುವುದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆ ಪಡಿಸು" ಎಂದು ಯೇಸುವು ಹೇಳಿದ ಮಾತುಗಳು ಹಾಗೂ ಸತ್ಯವೇದದ ಕೆಲವು ಇತರೆ ವಚನಗಳು ಇಂತಹ ಸಮಸ್ಯೆಗೆ ಅವಕಾಶ ನೀಡುತ್ತದೆ. ಇದೂ ಸಹ ಸಾಂಕೇತಿಕ ಭಾಷೆಯಾಗಿದೆಯೇ ?

ಹೌದು, ನಿಶ್ಚಯವಾಗಿಯೂ ಇದೂ ಸಹ ಸಾಂಕೇತಿಕ ಭಾಷೆಯಾಗಿದೆ. ಅಂತಹ ವಚನಗಳ ಅರ್ಥವನ್ನು ನಾವು ಬಯಸುವುದಾದರೆ, ವಿಷಯಗಳನ್ನು ದೇವರ ದೃಷ್ಟಿಯಲ್ಲಿ ನೋಡಲು ನಾವು ವಿಶೇಷವಾದ ಪ್ರಯತ್ನವನ್ನು ಮಾಡಬೇಕಾಗಿದೆ. ದೇವರಿಗೂ ನಮಗೂ ಅನೇಕ ವ್ಯತ್ಯಾಸಗಳಿವೆ. ಈಗ ಮಾತ್ರ ನಮಗೆ ಸಂಬಂಧಿಸಿದ್ದು ಇದಾಗಿದೆ. ನಮಗೆ ಭವಿಷ್ಯತ್ (ಮುಂದೆ ಏನಾಗುತ್ತದೆ ಎಂಬುದು) ನಲ್ಲಿ ಸಂಭವಿಸುವುದರ ಬಗ್ಗೆ ಏನೂ ತಿಳಿದಿಲ್ಲ; ನಾಳೆ ದಿನ ಏನಾಗಬಹುದು ಎಂಬುದನ್ನು ಮಾತ್ರ ಊಹಿಸಬಹುದಾಗಿದೆ.. ಆದರೆ ದೇವರಿಗೆ ಭವಿಷ್ಯತ್ ತಿಳಿದಿದೆ; ಈ ದಿನವು ನಮಗೆ ಎಷ್ಟು ಸತ್ಯವೋ ಹಾಗೆಯೇ ದೇವರಿಗೆ ನಾಳೆಯ ಬಗ್ಗೆ ತಿಳಿದಿರುತ್ತದೆ. ಆದ್ದರಿಂದಲೇ ಸತ್ಯವೇದದ ಪ್ರವಾದನೆಯು ಯಾವಾಗಲೂ ನಿಜವಾಗುವುದು. ಪೌಲನು ಈ ವಿಷಯದ ಬಗ್ಗೆ ರೋಮಾಪುರ 4:17 ರಲ್ಲಿ ವ್ಯಾಖ್ಯಾನ ಮಾಡಿದ್ದಾನೆ. ಆದಿಕಾಂಡದಲ್ಲಿ ದೇವರು ಅಬ್ರಹಾಮನಿಗೆ ಹೀಗೆ ಹೇಳಿದ್ದಾನೆಂದು ಪೌಲನು ತಿಳಿಸಿದ್ದಾನೆ "ನಾನು ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲಪಿತೃವಾಗಿ ನೇಮಿಸಿದ್ದೇನೆ" "ನೇಮಿಸಿದ್ದೇನೆ". ಎಂಬ ಪದವನ್ನು ಗಮನಿಸಿ. "ನೇಮಿಸುತ್ತೇನೆ" ಎಂದಲ್ಲ. ಆ ಸಂದರ್ಭದಲ್ಲಿ ಅಬ್ರಹಾಮನಿಗೆ ಒಬ್ಬನೇ ಮಗನಿದ್ದನು. ಆದರೆ ದೇವರು ಏನನ್ನಾದರೂ ವಾಗ್ದಾನ ಮಾಡಿದರೆ, ಆ ವಾಗ್ದಾನವು ನಿಶ್ಚಿತವಾದದ್ದಾಗಿರುತ್ತದೆ. ಅದು ಆಗಲೇ ನೆರವೇರಿಸಿದಂತೆ ಇರುತ್ತದೆ. ಒಬ್ಬ ಮನುಷ್ಯನು ಒಂದು ವಾಗ್ದಾನ ಮಾಡಿದಾಗ, ಸಾಮಾನ್ಯವಾಗಿ ಹೀಗೆ ಹೇಳುತ್ತಾನೆ: "ನಾನು ಇಂಥದನ್ನು ಮಾಡುತ್ತೇನೆ". ಆದರೆ ದೇವರು, ತನ್ನ ಪ್ರವಾದಿಗಳ ಮೂಲಕ ಆಗಿಂದಾಗ್ಗೆ ಭವಿಷ್ಯತ್ತಿನ ಬಗ್ಗೆ ಹೇಳುತ್ತಾನೆ, "ನಾನು ಇಂಥಿಂಥದನ್ನು ಮಾಡಿದ್ದೇನೆ." ಅಂದರೆ ಆತನು ನಿಶ್ಚಯವಾಗಿಯೂ ಅದನ್ನು ಮಾಡುವವನಾಗಿದ್ದಾನೆ.

ರೋಮಾಪುರ 4:17 ನೇ ವಚನದ ಮುಂದಿನ ಭಾಗದಲ್ಲಿ ಪೌಲನು ಅದೇ ಪಾಠವನ್ನು ಮುಂದಿಟ್ಟಿದ್ದಾನೆ, "ಇಲ್ಲದನ್ನು ಇರುವುದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು."

## ಭವಿಷ್ಯತ್ತು ದೇವರಿಗೆ ನೈಜವಾದದ್ದಾಗಿದೆ

ಅಪೋಸ್ತಲನಾದ ಪೌಲನಿಂದ ಸ್ವಲ್ಪ ಸಹಾಯ ಪಡೆದು ಒಂದು ಮುಖ್ಯವಾದ ನೀತಿಯನ್ನು ಈಗ ನಾವು ಸ್ಥಾಪಿಸಿದ್ದೇವೆ ನಮಗೆ ಭೂತ ಹಾಗೂ ವರ್ತಮಾನ ಕಾಲಗಳು ನೈಜವಾಗಿವೆ. ಆದರೆ ಭವಿಷ್ಯತ್ತು ನಮ್ಮ ಕಣ್ಣಿನಿಂದ ಮರೆಯಾಗಿಡಲ್ಪಟ್ಟಿದೆ. ಆದರೆ ದೇವನು ನಮಗಿಂತ ಭಿನ್ನವಾಗಿದ್ದಾನೆ. ಆತನು ಭವಿಷ್ಯತ್ತನ್ನು ಪರಿಪೂರ್ಣವಾಗಿ ನೋಡಬಲ್ಲನು. ಮಾನವರಿಗೆ ವರ್ತಮಾನ ಕಾಲವು ಎಷ್ಟು

ನೈಜವಾಗಿರುತ್ತದೋ ಹಾಗೆಯೇ ಭವಿಷ್ಯತ್ತು ದೇವರಿಗೆ ನೈಜವಾಗಿರುತ್ತದೆ. ತತ್ಪರಿಣಾಮವಾಗಿ ದೇವರು ಭವಿಷ್ಯತ್ತಿನಲ್ಲಿ ಸಂಭವಿಸುವ ಘಟನೆಗಳನ್ನು ಈಗಾಗಲೇ ನಡೆದಿರುವಂತೆ ಹೇಳಲು ಶಕ್ಯನಾಗಿದ್ದಾನೆ. ದೇವರು ಈ ರೀತಿಯಾಗಿ ಮಾಡಿರುವುದನ್ನು ಸತ್ಯವೇದದಲ್ಲಿ ಅನೇಕ ಕಡೆ ನೋಡಬಹುದಾಗಿದೆ. ಇಲ್ಲಿ ಮೂರು ವಚನಗಳನ್ನು ಕೊಟ್ಟಿದೆ :

1) ಯೆಹೋವನು ಈ ವಾಕ್ಯವನ್ನು ನನಗೆ ದಯಪಾಲಿಸಿದನು – ನಾನು ನಿನ್ನನ್ನು ಗರ್ಭದಲ್ಲಿ ರೂಪಿಸುವದಕ್ಕೆ ಮುಂಚೆ ನಿನ್ನನ್ನು ತಿಳಿದಿದ್ದೆನು ; ನೀನು ಉದರದಿಂದ ಬರುವದಕ್ಕೆ ಮೊದಲೇ ನಿನ್ನನ್ನು ಪ್ರತಿಷ್ಠಿಸಿದ್ದೆನು ; (ಯೆರೆಮೀಯ 1:4-5).

ಆ ಮನುಷ್ಯನು ಹುಟ್ಟುವ ಮೊದಲೇ ದೇವರು ಯೆರೆಮೀಯನನ್ನು ಅರಿತಿದ್ದನು ! ವಾಸ್ತವವಾಗಿ ಇದು ಸಾಂಕೇತಿಕ ಭಾಷೆಯಾಗಿದೆ. ಯೆರೆಮೀಯನು ಹುಟ್ಟುವ ಮೊದಲೇ ನಿಜವಾಗಿಯೂ ಇದ್ದನು ಎಂದರ್ಥವಲ್ಲ. ಅಂದರೆ ದೇವರು ಭವಿಷ್ಯತ್ತಿನೊಳಗೆ ನೋಡಲು ಶಕ್ಯನಾಗಿದ್ದಾನೆ ಮತ್ತು ಯೆರೆಮೀಯನು ಹುಟ್ಟುವ ಮುನ್ನವೇ ಅವನನ್ನು ನೋಡಬಲ್ಲವನಾಗಿದ್ದಾನೆ. ಇದನ್ನು ಇನ್ನೊಂದು ರೂಪದಲ್ಲಿ ಹೇಳುವುದಾದರೆ, ಯೆರೆಮೀಯನು ಹುಟ್ಟುವ ಮೊದಲೇ ಅವನು ದೇವರ ಆಲೋಚನೆಯಲ್ಲಿ ಇದ್ದನು.

2) "ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು. ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪ ಮಾಡಿದ್ದನು." (ಎಫೆಸ 1:4-5)

ಯೆರೆಮೀಯನು ಮಾತ್ರವಲ್ಲ ; ತನ್ನ ಸಭೆಯ ಸದಸ್ಯರು ಹುಟ್ಟುವ ಮುಂಚೆಯೇ ಅವರನ್ನು ದೇವರು ಅರಿತಿದ್ದನು ! ದೇವರ ಭವಿಷ್ಯತ್ತಿನ ಜ್ಞಾನದ ಮೇಲೆ ಅವಲಂಬಿತವಾದ ಇದೂ ಸಹ ಸಾಂಕೇತಿಕ ಭಾಷೆಯಾಗಿದೆ. ಅದೇ ವಚನದ ಎರಡನೇ ವಾಕ್ಯದಲ್ಲಿ ಪೌಲನು ತಾನು ಏನು ಅರ್ಥಮಾಡಿಕೊಂಡಿದ್ದನು ಎಂಬುದನ್ನು ಹೇಳುತ್ತಾನೆ : "ಆತನು ನಮ್ಮನ್ನು........ತನ್ನ ಪುತ್ರರನ್ನಾಗಿ ಸ್ವೀಕರಿಸುವುದಕ್ಕೆ.... ಮೊದಲೇ ಸಂಕಲ್ಪಿಸಿದ್ದನು." (ನಿರ್ಧರಿಸಿದ್ದನು.)

3) ಆತನು (ಯೇಸುವು) ಜಗದುತ್ಪತ್ತಿಗೆ ಮೊದಲೇ ಗೊತ್ತುಮಾಡಲ್ಪಟ್ಟು ಅಂತ್ಯಕಾಲದಲ್ಲಿ ನಿಮಗಾಗಿ ಪ್ರತ್ಯಕ್ಷನಾದನು. [1 ಪೇತ್ರ 1:20]

ದೇವರು ತಾನು ಈ ಲೋಕವನ್ನು ಸೃಷ್ಟಿ ಮಾಡುವುದಕ್ಕೆ ಮುಂಚೆಯೇ ಯೇಸುವಿನ ಬಗ್ಗೆ ಎಲ್ಲವೂ ಗೊತ್ತಿತ್ತು ಎಂಬುದಾಗಿ ಮೇಲೆ ಉಲ್ಲೇಖಿಸಿದ ವಚನವು ತಿಳಿಸುತ್ತದೆ. ಇದನ್ನು ಮಾತ್ರವೇ ನಾವು ನಿರೀಕ್ಷಿಸಬಹುದಾಗಿದೆ. ಹಿಂದಿನ ವಚನದಲ್ಲಿ ಲೋಕವು ಪ್ರಾರಂಭವಾಗುವುದಕ್ಕೆ ಮುಂಚೆಯೇ ದೇವರು ಆದಿ ಕ್ರೈಸ್ತರ ಬಗ್ಗೆ ತಿಳಿದಿದ್ದನು ಎಂಬುದನ್ನು ನಾವು ನೋಡಿದೆವು. ಯೆರೆಮಿಾಯ, ಆದಿಸಭೆ ಮತ್ತು ಕರ್ತನಾದ ಯೇಸುಕ್ರಿಸ್ತನು. ಆದಿಯಿಂದಲೂ ಇವರೆಲ್ಲರೂ, ದೇವರ ಆಲೋಚನೆಯಲ್ಲಿದ್ದರು.

ಆದ್ದರಿಂದ ಯೇಸುವು ಪರಲೋಕದಲ್ಲಿರುವ ತನ್ನ ತಂದೆಗೆ ಹೀಗೆ ಹೇಳಿದ್ದರಲ್ಲಿ ಆಶ್ಚರ್ಯವೇನಿಲ್ಲ; "ಲೋಕ ಉಂಟಾಗುವುದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆ ಪಡಿಸು."* [ಯೋಹಾನ 17:5]

ಇದರ ಅರ್ಥವೇನೆಂಬುದನ್ನು ಈಗ ನಾವು ತಿಳಿದಿದ್ದೇವೆ.

## ದೇವರು ಒಬ್ಬ ಮಹಾ ಯೋಜಕನು

ಮಾನವರು ಯಾವುದಾದರೊಂದು ಮುಖ್ಯ ಕಾರ್ಯವನ್ನು ಮಾಡಲು ಉದ್ದೇಶಿಸುವ ಮುನ್ನ ಒಂದು ಯೋಜನೆಯನ್ನು ರೂಪಿಸುವುದರಿಂದ ಪ್ರಾರಂಭಿಸುತ್ತಾರೆ.

ಶತ್ರುವಿನ ಮೇಲೆ ಧಾಳಿ ನಡೆಸುವ ಮುನ್ನ ಸೈನ್ಯಾಧಿಪತಿಯು ಯುದ್ಧದ ಒಂದು ಯೋಜನೆಯನ್ನು ತಯಾರಿಸಿ, ಅದನ್ನು ತನ್ನ ಅಧೀನ ಅಧಿಕಾರಿಗಳಿಗೆ ತಿಳಿಸುತ್ತಾನೆ. ಒಂದು ಬೃಹತ್ ಕಟ್ಟಡವನ್ನು ಕಟ್ಟುವ ಮುನ್ನ, ಅದರ ವಿವರವಾದ ನಕ್ಷೆಯನ್ನು ತಯಾರಿಸಲು ಒಬ್ಬ ವಾಸ್ತುಶಿಲ್ಪಿಯನ್ನು ನೇಮಕ ಮಾಡುತ್ತಾರೆ.

ಮಾನವರ ಯೋಜನೆಗಳು ಅನೇಕ ವೇಳೆ ಏನೂ ಇಲ್ಲದಂತಾಗುತ್ತದೆ. ಶತ್ರುವಿನ ಅನಿರೀಕ್ಷಿತ ಧಾಳಿಯಿಂದಾಗಿ ತಮ್ಮ ಧಾಳಿಯನ್ನು ಪ್ರಾರಂಭಿಸಲು ಸೈನ್ಯಾಧಿಕಾರಿಗಳಿಗೆ ಸಾಧ್ಯವಿಲ್ಲವಾಗಬಹುದಾಗಿದೆ. ಕಕ್ಷಿಗಾರನು ಹಣ ಕೊರತೆಯಿಂದಾಗಿ ನಕ್ಷೆಯನ್ನು ಹರಿದುಹಾಕುವಂತೆ ವಾಸ್ತುಶಿಲ್ಪಿಗೆ ಹೇಳಬಹುದು.

ಆದರೆ ಈ ಲೋಕದಲ್ಲಿ ದೇವರು ತನ್ನ ಯೋಜನೆಯನ್ನು ಕಾರ್ಯಾಚರಣೆಗೆ ತರುವಲ್ಲಿ ಯಾವುದೊಂದೂ ಅಡ್ಡಿ ಬಾರದು. ಆತನು ತನ್ನ ಕಾರ್ಯವನ್ನು ಪ್ರಾರಂಭಿಸುವ ಮುನ್ನವೇ ಆ ಕಾರ್ಯವನ್ನು ಪೂರೈಸಿರುವ ಹಾಗೆ ಆತನು ಮಾತನಾಡಲು ಪ್ರಾರಂಭಿಸಿದನು.

(ಮುಂದುವರಿಯುವುದು) —ಭಾ. ಚಂದುದಾಸ್

# ಪರ್ವತ ಪ್ರಸಂಗ-3

## ನೀತಿಗೆ ಹಸಿದು ಬಾಯಾರಿದವರು

(ಮುಂದುವರಿದುದು) —ವಿ. ಜಯವಂತ

ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನು ಅವರು ಹೃದಯದಲ್ಲಿ ಯೋಚಿಸುವುದೆಲ್ಲವೂ ಯಾವಾಗಲೂ ಬರೀ ಕೆಟ್ಟದಾಗಿರುವುದನ್ನು ಯೆಹೋವನು ನೋಡಿದನು. (ಆದಿಕಾಂಡ 6:5) ಇಂಥ ದುಷ್ಟ ಪ್ರಪಂಚದಲ್ಲಿ ಜೀವಿಸಿದ ನೋಹನು ಹೇಗೆ ಬದುಕಬಹುದಾಗಿದ್ದಿತು. ಇಂದು ನಾವು ನೋಹನಂತೆಯೇ ಈ ಲೋಕದಲ್ಲಿ ಜೀವಿಸುವುದಾದರೆ ನಮ್ಮನ್ನು ನೀತಿವಂತರೆಂದು ಕರೆಯಲು ದೇವರು ಇಷ್ಟಪಡುವುದಿಲ್ಲವೇ ದುಷ್ಟಲೋಕದವರ ಸಂಗಡವೇ ಇದ್ದು ದುಷ್ಟತ್ವದಿಂದ ದೂರಬಿದ್ದು ನೀತಿವಂತನೆಂದು ಎಣಿಸಲ್ಪಟ್ಟ ದುಷ್ಟರಿಗೆ ಒದಗುವ ಮರಣದಿಂದ ಪಾರಾದೆವಲ್ಲವೇ, 'ನೋಹನು ನೀತಿವಂತನು ತನ್ನ ಕಾಲದಲ್ಲಿ ತಪ್ಪಿಲ್ಲದವನು ಆಗಿದ್ದನು.' (ಆದಿಕಾಂಡ 6:9) ದೇವರು ಅಂದು ನೋಡುವಾಗ ಅದು ಕೆಟ್ಟುಹೋಗಿತ್ತು ಕೆಟ್ಟ ನಡವಳಿಕೆಯಿಂದ ತುಂಬಿತ್ತು. ಅದೇ ದೇವರು ಇಂದು ನಮ್ಮನ್ನು ನೋಡುವಾಗ ನಾವು ಹೇಗೆ ಕಂಡುಬರಬೇಕು ? ನೋಹನಂತೆಯೇ ಇಲ್ಲವೇ ನೋಹನನ್ನು ಬಿಟ್ಟು ಉಳಿದ ಲೋಕದ ಜನರಂತೆಯೇ ದೇವರ ಅನ್ಯೋನ್ಯತೆಯಲ್ಲಿ ನಡೆದರೆ ನೀತಿವಂತರು ಎಂದು ಎಣಿಸಲ್ಪಡುತ್ತೇವೆ.

ಪೌಲನು ಕೊರಿಂಥ ಸಭೆಗೆ ಬರೆಯುವಾಗ ಕ್ರಿಸ್ತನನ್ನು ಹಿಂಬಾಲಿಸಿ ಸುವಾರ್ತಾ ಸೇವೆಯನ್ನು ಮಾಡುವ ಜನರಿಗೆ ಒದಗುವ ಕಷ್ಟಗಳನ್ನು ತಿಳಿಸುತ್ತಾ "ಈ ಗಳಿಗೆಯವರೆಗೂ ನಾವು ಹಸಿದವರು, ಬಾಯರಿಕೆಯುಳ್ಳವರೂ........" [1 ಕೊರಿಂಥ 4:11] ಕ್ರಿಸ್ತನ ಹಿಂಬಾಲಕರಾದ ಮೇಲೆ ನಾವು ಯಾವುದಕ್ಕೆ ಪ್ರಥಮ ಸ್ಥಾನ ಕೊಡಬೇಕು ಎಂಬುದನ್ನು ಪೌಲನು ತಿಳಿಸುತ್ತಾನೆ. ಕ್ರಿಸ್ತನು ನಮಗೆ ಪ್ರಮುಖವಾದದ್ದು ಯಾವುದು ಎಂದು ಹೇಳುತ್ತಾನೆ ? "ನಮ್ಮ ಪ್ರಾಣಾಧಾರಣೆಗೆ ಏನು ಊಟ ಮಾಡಬೇಕು, ಏನು ಕುಡಿಯಬೇಕು. ನಮ್ಮ ದೇಹ ರಕ್ಷಣೆಗೆ ಏನು ಹೊದ್ದುಕೊಳ್ಳಬೇಕು ಎಂದು ಚಿಂತೆ ಮಾಡಬೇಡಿರಿ". ಮಾನವರಾದ ನಾವು ಯಾವ ವಿಷಯಕ್ಕಾಗಿ ಚಿಂತಿಸಬೇಕೆಂಬುದಾಗಿ ಹೇಳಿರುವನು. ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಲು ಕಲಿಸಿರುವನು. ಮೋಶೆಯು ತನ್ನ ದೇಹಕ್ಕೆ ಒದಗಿಬರುವ ಕೊರತೆಗಾಗಿ ಚಿಂತಿಸದೆ ನಾಲ್ವತ್ತು ದಿನಗಳು ಸೀನಾಯ್ ಬೆಟ್ಟದಲ್ಲಿ ದೇವರ ಸನ್ನಿಧಿಯಲ್ಲಿದ್ದು ಇಸ್ರಾಯೇಲ ಜನರಿಗೆ ಅವಶ್ಯಕವಾದ ಆಜ್ಞೆಗಳನ್ನು ತೆಗೆದುಕೊಂಡು ಬಂದನು.

ಮೋಶೆಗೆ ಊಟ ಮತ್ತು ನೀರು ಪ್ರಾಮುಖ್ಯವಾಗಿದ್ದರೆ ತನ್ನನ್ನು ಹಿಂಬಾಲಿಸದ ಜನರಿಗೆ ದೇವರಿಂದ ಕೊಡಲ್ಪಟ್ಟ ನಿಯಮಗಳನ್ನು ತಿಳಿಸಲು ಅಸಾಧ್ಯವಾಗುತ್ತಿದ್ದಿತು. ಮೋಶೆಯು ದೇವರ ಅಪ್ಪಣೆಗೆ ವಿಧೇಯನಾದನೇ ಹೊರತು ತಾನು ನಾಲ್ವತ್ತು ದಿನಗಳು ಆಹಾರವಿಲ್ಲದೆ ಇರಲು ಹೇಗೆ ಸಾಧ್ಯವೆಂದು ದೇವರನ್ನು ಪ್ರಶ್ನಿಸಲಿಲ್ಲ ದೇವರು ಆತನನ್ನು ಕಾಪಾಡಿದನು. "ಮೋಶೆ ಆ ಮೇಘದೊಳಗೆ ಪ್ರವೇಶಿಸಿ ಬೆಟ್ಟವನ್ನೇರಿದನು. ಅವನು ಆ ಬೆಟ್ಟದಲ್ಲಿ ಹಗಲಿರುಳು ನಾಲ್ವತ್ತು ದಿವಸ ಇದ್ದನು." [ವಿ. ಕಾ. 24:18]

ಪ್ರವಾದಿಯಾದ ಎಲೀಯನು ದೇವರಿಂದ ಒದಗಿಸಲ್ಪಟ್ಟ ಆಹಾರವನ್ನು ತಿಂದು ಅನಂತರ ನಾಲ್ವತ್ತು ದಿನಗಳು ಆಹಾರವಿಲ್ಲದೆ ದೇವಗಿರಿಯಾದ ಹೊರೇಬಿಗೆ ಪ್ರಯಾಣ ಮಾಡಿದನಲ್ಲವೇ ? ಹಾಗೆಂದ ಮೇಲೆ ಈಗ ದೇವರಿಂದ ಒದಗಿರುವ ಆತನ ವಾಕ್ಯವೆಂಬ ಆಹಾರವು ಆತನ ರಾಜ್ಯವನ್ನು ಸೇರಲು ಪ್ರಯಾಣ ಮಾಡುವವರಿಗೆ ಬಲ ಶಕ್ತಿಯನ್ನು ಒದಗಿಸುತ್ತದಲ್ಲವೇ ಅದರಿಂದ ಜೀವಿಸಿ ನಮ್ಮ ಪ್ರಯಾಣವನ್ನು ಬೆಳೆಸಲು ಸಾಧ್ಯವಲ್ಲವೇ? ಅದು ನಮ್ಮ ಹಸಿವೆಯನ್ನು ನೀಗಿಸಿ ಪ್ರಯಾಣಕ್ಕೆ ಬೇಕಾದ ಬಲವನ್ನು ಒದಗಿಸಲು ಶಕ್ತವಾಗಿದೆಯಲ್ಲವೇ ? "ಅವನು ಎದ್ದು ತಿಂದು, ಕುಡಿದು ಅದರ ಬಲದಿಂದ ನಾಲ್ವತ್ತು ದಿವಸ ಹಗಲಿರುಳು ಪ್ರಯಾಣ ಮಾಡಿ ದೇವಗಿರಿಯಾದ ಹೊರೇಬಿಗೆ ಮುಟ್ಟಿ ಅಲ್ಲಿನ ಒಂದು ಗವಿಯಲ್ಲಿ ಇಳಿದುಕೊಂಡನು. (1 ಅರಸು 19:8-9) ಆತನು ತೆಗೆದುಕೊಂಡ ಆಹಾರ ಆತನಿಗೆ ಕೊರತೆಯನ್ನುಂಟು ಮಾಡಲಿಲ್ಲ ಪ್ರಯಾಣದ ಕಾಲದಲ್ಲಿ ಪ್ರಾಣ ನಷ್ಟವಾಗಲಿಲ್ಲ. ನಾವು ದೇವರ ಮಾತಿನಂತೆ ಬದುಕುವದಾದರೆ ನಮಗೆ ಯಾವ ಹಾನಿಯೂ ಒದಗಲಾರದು "ಮನುಷ್ಯರು ಆಹಾರ ಮಾತ್ರದಿಂದಲ್ಲ ಯೆಹೋವನ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುತ್ತಾರೆಂಬುದು ನಿಮಗೆ ತಿಳಿಯುವಂತೆ ಆತನು ನಿಮ್ಮನ್ನು ಕಷ್ಟಕ್ಕೆ ಒಳಪಡಿಸಿ ಹಸಿವೆಯಿಂದ ಬಳಲಿಸಿ ನಿಮಗೂ ನಿಮ್ಮ ಪೂರ್ವಿಕರಿಗೂ ಗೊತ್ತಿಲ್ಲದ ಮನ್ನವನ್ನು ಕೊಟ್ಟು ಪೋಷಿಸಿದನು."(ಧರ್ಮಕಾಂಡ 8:3) ಪ್ರವಾದಿಯ ಜೀವಿತವು ನಮಗೆ ಮಾರ್ಗದರ್ಶನವಾದರೆ : ಇಸ್ರಾಯೇಲರ ನಲ್ವತ್ತು ವರ್ಷಗಳ ಜೊತೆಯು ನಮಗೆ ಏನನ್ನು ತಿಳಿಸುತ್ತದೆ? ದೇವರೇ ಒದಗಿದ ಆಹಾರವನ್ನು ಪ್ರತಿನಿತ್ಯವು ತಿನ್ನುತ್ತಿದ್ದರೂ ತಮ್ಮ ಜೀವಿತೆಯಲ್ಲಿ ಅದರ ಮಹತ್ವವನ್ನೇ ಅರಿಯದೆ ದೇವರ ಚಿತ್ತಕ್ಕೆ ವಿರುದ್ಧವಾಗಿ ನಡೆದರು, ಗುಣಗುಟ್ಟಿದರು, ಸೇವಕನನ್ನು ಅನೇಕ ವೇಳೆ ವಿರೋಧಿಸಿದರು. ತಮ್ಮ ಐಗುಪ್ತದ ಜೀವಿತೆಯಲ್ಲಿ ಉತ್ತಮವೂ ಸಂತೋಷ ಸಮಾಧಾನಗಳಿಂದ ಕೂಡಿದ್ದಿತೆಂದು ಹಿಂದಿರುಗಲೂ ಪ್ರಯತ್ನಿಸಿದರು. ಇಂದು ಕ್ರೈಸ್ತ ಜನಾಂಗವೂ ಈ ವಿಶೇಷವಾದ ಧರ್ಮಶಾಸ್ತ್ರವನ್ನು ಹೊಂದಿದ್ದರೂ ಅದರ ಮರ್ಮವನ್ನು ಅರಿಯದವರಾಗಿರುತ್ತಾರೆ. ಎಲೀಯನಂತೆ ಆ ಆಹಾರದಿಂದ ಬಲ ಹೊಂದಿದವರಾಗೋಣ ಇಸ್ರಾಯೇಲ್ಯರಂತೆ ಅದರ ಮಹತ್ವವನ್ನು ಅರಿಯದೆ ನಾಶವಾಗದೇ

ಇರೋಣ "........ಗಟ್ಟಿಯಾದ ಬಂಡೆಯೊಳಗಿಂದ ನೀರನ್ನು ಹೊರಡಿಸಿಕೊಟ್ಟು ಪೂರ್ವಿಕರಿಗೆ ತಿಳಿಯದೆ ಇದ್ದ ಮನ್ನವನ್ನು ಕೊಟ್ಟು ಪೋಷಿಸಿದಾತನನ್ನು ನೀವು ಮರೆತು ಮನಸ್ಸಿನೊಳಗೆ ಈ ಭಾಗವೂ ನಮ್ಮ ಸಾಮರ್ಥ್ಯ ಸಾಹಸಗಳಿಂದಲೇ ಉಂಟಾಯಿತೆಂದು ಅಂದುಕೊಂಡೀರಿ" [ಧರ್ಮಕಾಂಡ 8:15-17] ಇಸ್ರಾಯೇಲ್ಯರು ನೀರು ಮತ್ತು ಆಹಾರಕ್ಕಾಗಿ ನಾಲ್ವತ್ತು ವರ್ಷಗಳು ಶ್ರಮಪಡಲಿಲ್ಲ ಅವರಿಗೆ ಆಹಾರದ ಕೊರತೆಯಾಗಿರಲಿಲ್ಲ. ಲೋಕದ ಇತರ ಜನಾಂಗಗಳಿಗಿಂತ ವಿಶೇಷವಾದ ರೀತಿಯಲ್ಲಿ ಅರಣ್ಯದಲ್ಲಿ ಪೋಷಿಸಲ್ಪಟ್ಟರು. ಇಂದು ನಾವು ಆತನ ವಾಕ್ಯಗಳ ಮೂಲಕ ರಕ್ಷಿಸಿಕೊಳ್ಳಲು ಸಾಧ್ಯ ಎಂಬುದನ್ನು ಮರೆಯಬಾರದು. ಅವರ ನಾಯಕರು ಅವರಿಗಾಗಿ ನಾಲ್ವತ್ತು ದಿನಗಳು ಉಪವಾಸವಿದ್ದು ಈ ಅಮೂಲ್ಯವಾದ ದಶಾಜ್ಞೆಗಳನ್ನು ತಂದದ್ದನ್ನು ಮರೆತರಲ್ಲವೇ "....ನಾನು ಮೊದಲಿನಂತೆ ಅನ್ನ ಪಾನಗಳನ್ನು ಬಿಟ್ಟು ನಾಲ್ವತ್ತು ದಿನಗಳು ಹಗಲಿರುಳು ಯೆಹೋವನ ಸನ್ನಿಧಿಯಲ್ಲಿ ಬಿದ್ದಿದ್ದೆನು". ಧರ್ಮಕಾಂಡ 9:18.

ಯೆಹೋವನ ಸನ್ನಿಧಿಗೆ ಪ್ರಯಾಣ ಬೆಳೆಯಿಸುವಾಗಲೂ ಯೆಹೋವನ ಧರ್ಮಶಾಸ್ತ್ರವನ್ನು ಪಡೆಯುವಾಗಲೂ ಮತ್ತು ಅದರಂತೆ ನಡೆಯುವಾಗಲೂ ನಮಗೆ ದೇಹದ ಕೊರತೆಗಳು ಒದಗುವಾಗ ನಾವು ಅದರಿಂದ ಬಿದ್ದುಹೋಗದೆ ಧೈರ್ಯದಿಂದ ಸಾಗಬೇಕು. "ಇದು ನಿರರ್ಥಕವೆಂದು ಭಾವಿಸಬಾರದು; ಇದರಿಂದ ನೀವು ಆಳುವಿರಿ" [ಧ. ಕಾ. 32:47] ನಾವು ನಿಜವಾಗಿಯು ಹಸಿದವರು ಬಳಲಿದವರು ಆಗಿರಬೇಕು ಅದು ಲೋಕದ ಆಹಾರದ ವಿಷಯದಲ್ಲಿ ಅಲ್ಲ ನೀತಿಯ ವಿಷಯದಲ್ಲಿ ನಾವು ದೇವರ ಮುಂದೆ ಏನು ಇಲ್ಲದವರಾಗಿದ್ದೇವೆ ಎಂಬುದನ್ನು ಕ್ಷಣ ಕ್ಷಣವೂ ಅರಿಯಲೇಬೇಕು. "ಅದಕ್ಕಾಗಿ ತವಕ ಪಡೆಯಬೇಕು. ಇಸ್ರಾಯೇಲ್ಯರು ಮನ್ನವನ್ನು ತಿಂದರೂ ಆದರೆ ಅವರು ಗತಿಸಿದರು. ಇಲ್ಲಿ ಕ್ರಿಸ್ತನು ದೇವರು ಕೊಡುವ ನಿಜವಾದ ಆಹಾರವು ಜೀವವನ್ನು ಕೊಡುವುದಾಗಿದೆ ಎಂದು ತಿಳಿಸುತ್ತಾನೆ. ಇಸ್ರಾಯೇಲ್ಯರು ಆಹಾರವನ್ನು ತಿಂದರು ಆದರೆ ಅವರು ದೇವರಿಂದ ನೀತಿವಂತರು ಎಂಬುದಾಗಿ ಪರಿಗಣಿಸಲ್ಪಡಲಿಲ್ಲ. "ನೀತಿವಂತನು ಇಲ್ಲ ಒಬ್ಬನಾದರೂ ಇಲ್ಲ" [ರೋಮ 3:10] ನೀತಿವಂತರಾಗಿ ನಿತ್ಯಜೀವ ಪಡೆಯಲು ನಾವು ತಿನ್ನಲೇಬೇಕಾದ ನಿಜವಾದ ಆಹಾರವು ಯಾವುದು? "ಮೋಶೆ ನಿಮಗೆ ಪರಲೋಕದಿಂದ ರೊಟ್ಟಿ ಕೊಟ್ಟವನಲ್ಲ, ನನ್ನ ತಂದೆಯು ಪರಲೋಕದಿಂದ ಬರುವ ನಿಜವಾದ ರೊಟ್ಟಿಯನ್ನು ನಿಮಗೆ ಕೊಡುತ್ತಾನೆ. ದೇವರು ಕೊಡುವ ಆ ರೊಟ್ಟಿಯು ಯಾವುದೆಂದರೆ ಪರಲೋಕದಿಂದ ಇಳಿದು ಬಂದು ಲೋಕಕ್ಕೆ ಜೀವವನ್ನು ಉಂಟುಮಾಡುವಂಥದ್ದೇ........ಎಂದೆಗೂ ಹಸಿವೆಯಾಗುವುದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ" [ಯೋಹಾನ 6:32-35-50-53-54.]

"ನಿತ್ಯಜೀವಕ್ಕಾಗಿ ನಮ್ಮ ಕರ್ತನಾದ ಯೇಸುಕ್ರಿಸ್ತನ ಕರುಣೆಯನ್ನು ಎದುರುನೋಡುತ್ತಾ ನಿಮ್ಮನ್ನು ದೇವ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ. ಸಂದೇಹ ಪಡುವ ಕೆಲವರಿಗೆ ಕರುಣೆ ತೋರಿಸಿ ಅವರನ್ನು ಬೆಂಕಿಯ ಬಾಯೊಳಗಿಂದ ಎಳೆದು ರಕ್ಷಿಸಿರಿ ಕೆಲವರನ್ನು ಭಯ ಭಕ್ತಿಯುಳ್ಳವರಾಗಿ ಕರುಣಿಸಿರಿ ಹೊಲಸು ನಡತೆಯಿಂದ ಮೈಲಿಗೆಯಾದ ಅವರ ಅಂಗಿಯನ್ನು ಅಸಹ್ಯಿಸಿರಿ [ಯೂದ 1:21-23 ]

## ನಿರ್ಮಲಚಿತ್ತರು ಧನ್ಯರು

ಒಬ್ಬನು ತನ್ನನ್ನು ಅಶುದ್ಧನೆಂಬುದಾಗಿ ತಿಳಿಯುವುದು ಹೇಗೆ? ಅಶುದ್ಧ ಪದಾರ್ಥಗಳು ಅವನಿಗೆ ತಗಲಿದಾಗ ಮತ್ತು ತನ್ನ ದೇಹದಲ್ಲಿ ಅಶುದ್ಧತೆ ಕಾಣಿಸಿಕೊಂಡಾಗ ನಿಷಿದ್ಧ ವಸ್ತುಗಳನ್ನು ಸೇವಿಸಿದರಿಂದಾಗಲೀ ಅಶುದ್ಧನಾಗುವನು. ಇದು ಮತ್ತೊಂದು ಸಂಗತಿ. ಸತ್ತ ಪ್ರಾಣಿಗಳು ಸೋಕಿದರೆ ಅಶುದ್ಧನಾಗುವನು. ಕುಷ್ಠ ರೋಗಿಯನ್ನು ಮುಟ್ಟಿದರೆ ಅಶುದ್ಧನಾಗುವನು ಹೀಗೆ ಅಶುದ್ಧವಾದವನು ಪರಿಶುದ್ಧ ಸ್ಥಳದಲ್ಲಿ ನಿಲ್ಲಬೇಕಾದರೆ ತನ್ನನ್ನು ಧರ್ಮಶಾಸ್ತ್ರದ ನೇಮದ ಕ್ರಮವನ್ನು ಅನುಸರಿಸಿಕೊಂಡು ಶುದ್ಧವಾದನಂತರ ಪರಿಶುದ್ಧ ಸ್ಥಳದಲ್ಲಿ ಸೇರಲು ಅರ್ಹನಾಗುವನು ಇಲ್ಲದಿದ್ದರೆ ಅಂತಹವರು ಪಾಳೆಯದಿಂದ ಹೊರಗೆ ಜೀವಿಸಬೇಕಾಗುತಿತ್ತು. ಈ ದೈಹಿಕ ಶುದ್ಧಾಚಾರವೇ ಪ್ರಾಮುಖ್ಯವೆಂದು ಇಸ್ರಾಯೇಲ್ಯರು ಮನಗಂಡು ಅನೇಕ ರೀತಿಯಲ್ಲಿ ಆ ವಿಷಯಗಳಿಗೆ ಮಹತ್ವ ಕೊಡಲು ಅನೇಕ ತಮ್ಮದೇ ಆದ ನೇಮಗಳನ್ನು ಏರ್ಪಡಿಸಿ ಸಂಪ್ರದಾಯಗಳಲ್ಲಿ ಸಿಕ್ಕಿಕೊಂಡರು. ನಿಜವಾದ ಸಂಗತಿಯಿಂದ ದೂರವಾಗುತ್ತಾರೆಂದು ಕುರುಡರಾದರು. ಸಂಪ್ರದಾಯಗಳಲ್ಲಿಯೇ ಮಗ್ನರಾದರೂ ಅವುಗಳೇ ತಮ್ಮ ಸ್ವರ್ಗಕ್ಕೆ ಕರೆದೊಯ್ಯುವುದಕ್ಕೆ ಆಧಾರವೆಂದು ನಂಬಿದರು. ದೇಹದ ಮಲಿನತ್ವವನ್ನು ತೆಗೆದುಹಾಕುವುದರಿಂದ ನಮಗೆ ಆರೋಗ್ಯವೇ ಅದರಿಂದ ನಷ್ಟವೇನೂ ಇಲ್ಲ. ಇಂದು ಪ್ರಪಂಚವನ್ನು ನೋಡುವಾಗ ದೇಹದ ಮಲಿನತೆಯ ಹಾನಿಗಿಂತ ಪ್ರಕೃತಿಯ ಮಲಿನತೆ ಹೆಚ್ಚುತ್ತಾ ಬಂದು ಅದರ ವಿಷಯದ ಕಡೆ ಪ್ರಾಮುಖ್ಯತೆ ಕೊಡಲು ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ಬೃಹತ್ ರಾಷ್ಟ್ರದ ಹೇಳಿಕೆಗಳನ್ನು ನೀಡುತ್ತವೆ. ಆದರೆ ಅವು ಸಫಲವಾಗುವಂತೆ ಕಾಣುವುದಿಲ್ಲ ಇದಕ್ಕೆ ಮೂಲ ಕಾರಣವಾದ ಮಾನವನ ದೃಢಮನಸ್ಸು ಚಿತ್ತ ಆಲೋಚನೆ ಚಿತ್ತಬುದ್ಧಿ ಮುಂತಾಗಿ ತಿಳಿಸುವ ಸಂಗತಿಯೇ ಮಲಿನವಾಗಿರುವುದರಿಂದ ಮಾನವನ ಯಾವ ಪ್ರಯತ್ನವೂ ಈ ದಿಶೆಯಲ್ಲಿ ಸಾರ್ಥಕವಾಗುವುದಿಲ್ಲ.

ಹೃದಯದ ಮಲಿನತೆಯನ್ನು ತೊಳೆದುಕೊಳ್ಳುವುದೇ ಮುಖ್ಯ. ಕ್ರಿಸ್ತನ ವಾಕ್ಯಗಳಿಂದ ನಮ್ಮನ್ನು ಶುದ್ಧೀಕರಿಸಿಕೊಳ್ಳಲು ಹೊರಟರೆ ಅದು ಇಸ್ರಾಯೇಲ್ಯರು

ತಮ್ಮನ್ನು ಶುದ್ಧೀಕರಿಸಿಕೊಂಡಂತೆ ಆಗುತ್ತದೆ. ಅವರು ಕ್ರಿಸ್ತನ ಮುಂದೆ ಹೇಗಾದರು? ಇಸ್ರಾಯೇಲ್ಯರು ತಮ್ಮ ಸಂಪ್ರದಾಯಗಳ ಮತ್ತು ಆಚಾರಗಳ ಮೂಲಕ ದೇವರ ಸಮೀಪಸ್ಥರಾಗಿದ್ದರು. ಕ್ರಿಸ್ತನು ಅವರ ಕಪಟತ್ವದ ವಿಷಯದಲ್ಲಿ ಅವರ ಹಿರಿಯರ ನಡವಳಿಕೆಯು ಹೇಗಿದ್ದಿತು ಮತ್ತು ಈಗಿನ ಇವರ ನಡವಳಿಕೆ ಹೇಗಿದೆ ಎಂಬುದನ್ನು ಅರಿವು ಮಾಡಿದ್ದಾಗಿಯೂ ತಮ್ಮನ್ನು ಸರಿಪಡಿಸಿಕೊಳ್ಳಲಿಲ್ಲ ಇಂದಿನ ನಮ್ಮ ಪರಿಸ್ಥಿತಿಯು ಹೀಗೆಯೇ ಆಗಿರುತ್ತದೆ ಎಂಬುದನ್ನು ಆಲೋಚಿಸಬೇಕು. "ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯ ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವುದರಿಂದ ನನಗೆ ಭಕ್ತಿ ತೋರಿಸುವುದು ವ್ಯರ್ಥ" ಎಂಬುದೇ [ಮತ್ತಾಯ 15:8] ಇಸ್ರಾಯೇಲ್ಯರ ಸಂಪ್ರದಾಯದ ಆಚಾರಗಳನ್ನು ವಿರೋಧಿಸಿದ್ದಲ್ಲದೆ ಅವರ ಧರ್ಮಶಾಸ್ತ್ರದ ಅನೇಕ ಆಚಾರಗಳು ಯಾವ ನಿಜ ಸಂಗತಿಗಳ ಛಾಯೆಯಾಗಿದೆ ಎಂಬುದನ್ನು ಪರಿಷ್ಕಾರವಾಗಿ ತೋರಿಸಿಕೊಟ್ಟನು. "ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದಿರುವವನಂತೆ ನೀವು ದೋಷವಿಲ್ಲದವರಾಗಿರಿ" [ಮತ್ತಾಯ 5:48] ದೇವರು ತಾನಿರುವಂತೆಯೇ ತನ್ನ ಸೃಷ್ಟಿಯಾದ ಮಾನವನಿರಬೇಕೆಂಬುದೇ ಆತನ ಅಪೇಕ್ಷೆ. ಕ್ರಿಸ್ತನು ಫರಿಸಾಯರು ಮತ್ತು ಶಾಸ್ತ್ರಿಗಳನ್ನು ಕುರಿತು ಹೇಳಿದ ದೇವರ ಮಾತನ್ನು ಗಮನಿಸುವ ಆತನು ಯಾವುದರ ಶುದ್ಧತೆಗೆ ಮಾನ್ಯತೆ ನೀಡಿದನು, ಆದರೆ ಅವರು ಯಾವುದಕ್ಕೆ ಪ್ರಥಮ ಸ್ಥಾನ ಕೊಟ್ಟಿದ್ದರು ? "ಅಯ್ಯೋ ! ಕಪಟಿಗಳಾದ ಶಾಸ್ತ್ರಿಗಳೇ ಫರಿಸಾಯರೇ ನೀವು ಪಂಚಪಾತ್ರೆ, ಬಟ್ಟಲು ಇವುಗಳ ಹೊರಭಾಗವನ್ನು ಶುಚಿ ಮಾಡುತ್ತೀರಿ ಆದರೆ ಅವು ಒಳಗೆ ಸುಲುಕೊಂಡವುಗಳಿಂದಲೂ ಇಹ ಭೋಗ ಪದಾರ್ಥಗಳಿಂದಲೂ ತುಂಬಿರುತ್ತವೆ. ಕುರುಡನಾದ ಫರಿಸಾಯನು ಮೊದಲು ಪಂಚಪಾತ್ರೆ ಬಟ್ಟಲುಗಳ ಒಳಭಾಗವನ್ನು ಶುಚಿ ಮಾಡು. ಆಗ ಅವುಗಳ ಹೊರಭಾಗವೂ ಶುಚಿಯಾಗುವುದು". [ಮತ್ತಾಯ 23:25] ದೇವರು ಮಾನವರು ಪರಿಶುದ್ಧರಾಗಿರಬೇಕೆಂದು ಬಯಸುತ್ತಾರೆ. ಅಶುದ್ಧತೆ. ಮಲಿನತೆ ಇವುಗಳಿಂದ ಕೂಡಿದ ವಸ್ತುವನ್ನಾಗಲೀ ಇಲ್ಲವೇ ಜೀವಿಗಳನ್ನಾಗಲೀ ಮಾನವರಾದ ನಾವೇ ನಮ್ಮ ಬಳಿಯಲ್ಲಿ ಇಟ್ಟುಕೊಳ್ಳಲು ಇಷ್ಟಪಡುವುದಿಲ್ಲ. ಅದನ್ನು ಹೋಗಲಾಡಿಸಲು ಇಲ್ಲವೇ ತೆಗೆದುಹಾಕಲು ಪ್ರಯತ್ನಿಸುತ್ತೇವೆ. ಅಶುದ್ಧತೆಯನ್ನು ತೆಗೆದುಹಾಕುವುದು ತಪ್ಪಲ್ಲ. ಐಗುಪ್ತ ದೇಶದಿಂದ ಇಸ್ರಾಯೇಲ್ಯರನ್ನು ಕರೆತರಲು ಕಾರಣವೇನು ? "ನಿಮ್ಮ ದೇವರಾಗಿರುವುದಕ್ಕೆ ನಿಮ್ಮನ್ನು ಐಗುಪ್ತ ದೇಶದೊಳಗಿಂದ ಬರಮಾಡಿದ ಯೆಹೋವನು ನಾನು, ನಾನು ಪರಿಶುದ್ಧನಾಗಿರುವುದರಿಂದ ನೀವೂ ಪರಿಶುದ್ಧರಾಗಿರಬೇಕು" [ಯಾಜಕಕಾಂಡ 11:45] ದೇವರ ಈ ಯೋಜನೆಯು ಸರಿಯಲ್ಲವೆಂದು ಹೇಳುವುದು ಹೇಗೆ ? ಇದಲ್ಲದೆ ಶುದ್ಧಾಶುದ್ಧಗಳನ್ನು ನಿರ್ಣಯಿಸುವ ವಿವೇಚನೆ

ಯನ್ನು ಆತನು ನಮಗೆ ಕೊಟ್ಟಿರುತ್ತಾನೆ. ಪರಿಶುದ್ಧರಾಗದೇ ಆತನ ನಿವಾಸದಲ್ಲಿ ಸೇರಲು ಅಸಾಧ್ಯ. ನೋಹನ ಕಾಲವನ್ನು ನೋಡುವಾಗ ಲೋಕವೂ ಕೆಟ್ಟದರಿಂದ ತುಂಬಿದುದರಿಂದ ಅದನ್ನು ದೇವರು ನಾಶಪಡಿಸಿದನು ಎಂದು ಅರಿವಾಗುತ್ತದೆ. ನಾವು ಕೆಟ್ಟದ್ದರಿಂದ ತುಂಬಿದ್ದರೆ ನಾಶನವೂ ಖಂಡಿತಾ ಎಂಬುದು ಇದರಿಂದ ತಿಳಿಯುತ್ತೇವೆ ಅಲ್ಲವೇ ? ಅಂದಿನ ಲೋಕದ ಜನರ ಹೃದಯದ ಆಲೋಚನೆಗಳು ಕೆಟ್ಟದಾಗಿದ್ದಿತೆಂದು ತಿಳಿಸುವುದನ್ನು "ಮನುಷ್ಯರ ಕೆಟ್ಟತನವೂ ಭೂಮಿಯ ಮೇಲೆ ಹೆಚ್ಚಾಗಿರುವುದನ್ನು ಅವರು ಹೃದಯದಲ್ಲಿ ಯೋಚಿಸುವುದೆಲ್ಲವೂ ಯಾವಾಗಲೂ ಬರೀ ಕೆಟ್ಟದಾಗಿರುವುದನ್ನು ಯೆಹೋವನು ನೋಡಿ" [ಆದಿಕಾಂಡ 6:5] ಮಾನವನ ಹೃದಯವು ಕೆಟ್ಟದೆ ಎಂದು ಹೇಳುವಾಗ ಆತನ ಮನಸ್ಸಿನೊಳಗಿನ ಆಲೋಚನೆ, ಸಂಕಲ್ಪ, ಬುದ್ಧಿ, ಜ್ಞಾನವು ದೇವರಿಗೆ ಹೇಯವಾಗಿದೆ ಎಂದು ತಿಳಿಯಬೇಕಲ್ಲವೆ. ಅರಣ್ಯದಲ್ಲಿ ಮೋಶೆಯು ದೇವರ ಬಳಿಯಲ್ಲಿ ಬೆಟ್ಟದಲ್ಲಿ ಮಾತಾಡುವಾಗ ಜನರು ಅದನ್ನು ವೀಕ್ಷಿಸುವ ಮೊದಲು ಅವರು ತಮ್ಮನ್ನು ಪರಿಶುದ್ಧಗೊಳಿಸಿಕೊಳ್ಳಲು ತಿಳಿಸುವೆನಲ್ಲವೇ "ನೀನು ಜನರ ಬಳಿಗೆ ಹೋಗಿ ಈ ಹೊತ್ತು ನಾಳೆ ಅ ವ ರ ನ್ನು ಪರಿಶುದ್ಧಗೊಳಿಸು ಅವರು ತಮ್ಮ ಬಟ್ಟೆಗಳನ್ನು ಮಡಿ ಮಾಡಿಕೊಂಡು" [ವಿ. ಕಾ. 19:10.]

ದೇವರ ದರ್ಶನವನ್ನು ಅಪೇಕ್ಷಿಸುವವರು ತಮ್ಮ ದೇಹದ ಕೊಳೆಯನ್ನು ಹೋಗಲಾಡಿಸಿಕೊಳ್ಳುವುದರಲ್ಲಿ ತಮ್ಮ ಹೃದಯದ ಮಲಿನತ್ವವನ್ನು ಹೋಗಲಾಡಿಸಿಕೊಳ್ಳುವುದು ಮುಖ್ಯ. ಇಬ್ರಿಯ ಪತ್ರಕರ್ತನು ಹೀಗೆ ಹೇಳುತ್ತಾನೆ : "ಎಲ್ಲರ ಸಂಗಡ ಸಮಾಧಾನದಿಂದಿರುವುದಕ್ಕೂ ಪರಿಶುದ್ಧತೆಯನ್ನು ಹೊಂದುವುದಕ್ಕೂ ಪ್ರಯತ್ನ ಮಾಡಿರಿ ; ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವುದಿಲ್ಲ." [ಇಬ್ರಿಯ 12:14] ಈಗ ನಾವು ಅಗತ್ಯವಾಗಿ ಪರಿಶುದ್ಧರಾಗುವುದು ಹೇಗೆ ಎಂದು ಅರಿತು ನಮ್ಮನ್ನು ನಾವು ಪರಿಶುದ್ಧರನ್ನಾಗಿ ಮಾಡಿಕೊಳ್ಳಬೇಕು.

ಒಬ್ಬನು ದೋಷಿ ಎಂದು ದೇವರು ಹೇಗೆ ತೀರ್ಮಾನಿಸುವನು ? ಅವನ ನಡತೆಯ ಪ್ರಕಾರವಲ್ಲವೇ ? ಪ್ರತಿಯೊಬ್ಬನು ತನ್ನ ಮನಸ್ಸಿನ ಆಲೋಚನೆಯಂತೆ ನಡೆಯುವುದು ಸಹಜ. "ಅವರೋ–ಏನೂ ನಿರೀಕ್ಷೆಯಿಲ್ಲ ; ನಮ್ಮ ಆಲೋಚನೆಗೆ ತಕ್ಕಂತೆ ನಡೆಯುವೆವು. ನಮ್ಮಲ್ಲಿ ಪ್ರತಿಯೊಬ್ಬರು ನಮ್ಮ ದೃಷ್ಟ ಹೃದಯದ ಹಾಗೆ ಮಾ ಡು ವೆ ವು ಎಂದು ಹೇಳುತ್ತಾರೆ." [ಯೆರೆ 18:12] ಮಾನವರು ದೇಹದ ಹೊರಭಾಗವನ್ನು ನೋಡಿ ತೀರ್ಮಾನಿಸಿದರೆ ದೇವರು ಅವರ ಹೃದಯವನ್ನು ಪರಿಶೀಲಿಸಿ ತಿಳಿಸುತ್ತಾನೆಂಬುದನ್ನು ಮರೆಯಬಾರದು. ಇಂಥಾ ದುಷ್ಟ ಜನರನ್ನು ಕುರಿತು ದೇವರು ಹೇಳುವುದೇನು ? "ನೀವು ಮಾಡುತ್ತಾ ಬಂದಿರುವ ಅಪರಾಧಗಳನ್ನೆಲ್ಲಾ ನಿಮ್ಮಿಂದ ತೊಲಗಿಸಿ ಬಿಟ್ಟು ನಿಮ್ಮ ಹೃದಯವನ್ನು, ಸ್ವಭಾವವನ್ನು ನೂತನ ಮಾಡಿಕೊಳ್ಳಿರಿ" [ಯೆರೆ 18:30 ] (ಮುಂದುವರೆಯುವುದು)

# ಸತ್ಯವೇದದ ಮೂಲ ತತ್ವಗಳು - 4

## iii ಪವಿತ್ರಾತ್ಮ (ಮುಂದುವರಿದುದು)

(2) ಪವಿತ್ರಾತ್ಮವನ್ನು ವ್ಯಕ್ತೀಕರಿಸಿದೆ (The Spirit is personified) ಆದ್ದರಿಂದ ತಂದೆಯಿಂದ ಪ್ರತ್ಯೇಕವಾದ ಒಬ್ಬ ವ್ಯಕ್ತಿಯೆಂದು ಕೆಲವರು ತಪ್ಪಾಗಿ ಊಹಿಸುತ್ತಾರೆ. ವ್ಯಕ್ತೀಕರಣ ರೂಪದಲ್ಲಿ ಮಾತನಾಡುವುದು ಯೇಸುವಿಗೆ ಸಾಮಾನ್ಯವಾಗಿತ್ತು. ಉದಾಹರಣೆಗೆ: "ನೀವು ದೇವರನ್ನೂ ಮಮೋನನ್ನೂ ಕೂಡ ಸೇವಿಸಲಾರಿರಿ" (ಮತ್ತಾಯ 6:24). ಇಲ್ಲಿ ಯೇಸುವು "ಧನ" ಅಥವಾ ಲೌಕಿಕ ಐಶ್ವರ್ಯವನ್ನು "ಮಮೋನ್" ಎಂಬ ಒಡೆಯನೆಂದು ಸಂಬೋಧಿಸುತ್ತಾನೆ. ಪಾಪವನ್ನೂ ಸಹ ಒಬ್ಬ ಒಡೆಯನಿಗೆ ಹೋಲಿಸಿ ಯೇಸುವು ಮಾತನಾಡುತ್ತಾನೆ. "ಪಾಪ ಮಾಡುವವರೆಲ್ಲರೂ ಪಾಪಕ್ಕೆ ದಾಸರಾಗಿದ್ದಾರೆ." (ಯೋಹಾನ 8:34). ಪೌಲನು ಪಾಪವನ್ನು ಒಬ್ಬ ರಾಜನಿಗೆ ಹೋಲಿಸಿದ್ದಾನೆ: "ಪಾಪವು ಮರಣ ವನ್ನುಂಟುಮಾಡುತ್ತಾ ಅಧಿಕಾರವನ್ನು ನಡಿಸಿದ ಹಾಗೆಯೇ..." (ರೋಮಾಪುರ 5:21). "ಜ್ಞಾನ"ವನ್ನು ಸೊಲೋಮೋನನು ಒಬ್ಬ ಸ್ತ್ರೀಗೆ ಹೋಲಿಸಿದ್ದಾನೆ: "ಜ್ಞಾನವೆಂಬಾಕೆಯು ಕರೆಯುತ್ತಾಳೆ..." (ಜ್ಞಾನೋಕ್ತಿ 8:1).

ದೇವರು ತನ್ನ ಶಕ್ತಿಯ ಮೂಲಕ ಕಾರ್ಯಾಚರಣೆ ,ನಡೆಸಿ, ಅದರ ಮೂಲಕ ಮಾತಾಡಿದ್ದರಿಂದಲೂ ಅದರಿಂದಾಗಿ ಅದು "ವೈಯಕ್ತಿಕ" ದೃಷ್ಟಿ ಹೊಂದಿರುವುದ ರಿಂದಲೂ, ಅದನ್ನು "ವ್ಯಕ್ತೀಕರಿಸಿದೆ "

"ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು ; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವುದಕ್ಕೆ ಕೊಡುವನು. ಆ ಸಹಾಯಕನು ಯಾರೆಂದರೆ ಸತ್ಯದ ಆತ್ಮನೇ. ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವುದರಿಂದ ಆತನನ್ನು ಹೊಂದಲಾರದು. ನೀವು ಆತನನ್ನು ಬಲ್ಲಿರಿ. ಹೇಗೆಂದರೆ ನಿಮ್ಮ ಬಳಿಯಲ್ಲಿ ವಾಸ ಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವನು. ನಾನು ನಿಮ್ಮನ್ನು ಅನಾಥರಾಗಿ ಬಿಡುವುದಿಲ್ಲ; ನಿಮ್ಮ ಬಳಿಗೆ ಬರುತ್ತೇನೆ." (ಯೋಹಾನ 14:16-18).

"ಬೇರೊಬ್ಬ" ಸಹಾಯಕ ಎಂದು ಹೇಳುವಲ್ಲಿ, ಈಗಾಗಲೇ ಅವರು ಒಬ್ಬ ಸಹಾಯಕನನ್ನು ಅಂದರೆ ಯೇಸುವನ್ನು ಹೊಂದಿದ್ದರು ಎಂದು ಈ ವಚನದ ಅರ್ಥ ವಾಗುತ್ತದೆ. 1 ಯೋಹಾನ 2:1 ರಲ್ಲಿ ಯೇಸುವನ್ನು ಸಹಾಯಕನೆಂದು ಕರೆಯ ಲ್ಪಟ್ಟಿದೆ. ಈ ಎರಡೂ ವಚನಗಳಲ್ಲಿ "ಸಹಾಯಕ" ಎಂಬ ಪದಕ್ಕೆ ಗ್ರೀಕ್ ಭಾಷೆಯ ಮೂಲಪದ "PARAKLETOS" ಎಂದು ಉಪಯೋಗಿಸಿದೆ. ಯೇಸುವು ಇನ್ನು

ಸ್ವಲ್ಪ ಕಾಲದನಂತರ ತನ್ನ ತಂದೆಯು ಬಳಿಗೆ ಹೋಗುವವನಿದ್ದನು; ತನ್ನ ಪ್ರಿಯ ಮಕ್ಕಳ ಕ್ಷೇಮದ ಬಗ್ಗೆ ಆತನಿಗೆ ಕಾಳಜಿ ಇತ್ತು (ಯೋಹಾನ 13:33). ಅವರಿಗೆ ಮತ್ತೆ ಭರವಸೆ ನೀಡಲು ತಾನು ಮತ್ತು ತನ್ನ ತಂದೆಯು ಪವಿತ್ರಾತ್ಮ ಶಕ್ತಿಯ ಮೂಲಕ ಅವರಲ್ಲಿ ವಾಸಿಸುವುದಾಗಿ ಯೇಸುವು ಅವರಿಗೆ ಹೇಳುತ್ತಾನೆ. "ಆತನಿಂದ ನೀವು ಹೊಂದಿದ ಉಪದೇಶವು ನಿಮ್ಮಲ್ಲಿ ನೆಲೆಗೊಂಡಿರುವುದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವದು ಅವಶ್ಯವಿಲ್ಲ" (ಯೋಹಾನ 2:27) "ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ. ಆತನು ಇವನಲ್ಲಿ ನೆಲೆಗೊಂಡಿರುತ್ತಾನೆ ನಮ್ಮಲ್ಲಿ ನೆಲೆಗೊಂಡಿದ್ದಾನೆಂದು ಆತನು ನಮಗೆ ಅನುಗ್ರಹಿಸಿದ ಆತ್ಮನಿಂದಲೇ ಬಲ್ಲೆವು" (1 ಯೋಹಾನ 3:24). ಈ ವಚನಗಳಲ್ಲಿ "ಆತನು" ಎಂಬುದು ತಂದೆಯಾದ ದೇವರಿಗೆ ಅನ್ವಯಿಸುತ್ತದೆ.

ಪವಿತ್ರಾತ್ಮ ಶಕ್ತಿಯನ್ನು ಒಬ್ಬರಿಂದ ಮತ್ತೊಬ್ಬರಿಗೆ ವರ್ಗಾಯಿಸುವ ಶಕ್ತಿಯು ಅಪೋಸ್ತಲರ ಮರಣದ ನಂತರ ಅಂತ್ಯಗೊಂಡಿತು. (ಅಪೋಸ್ತಲರ ಕೃತ್ಯಗಳು 8:17-18 ; 1 ಕೊರಿಂಥ 13:8) ಆದರೆ ಹೊಸ ಒಡಂಬಡಿಕೆಯನ್ನು ಆ ಶಕ್ತಿಯ ನೇರ ಪ್ರಭಾವದಿಂದ ಬರೆಯಲ್ಪಟ್ಟಿತು. "ವಾಕ್ಯ"ವನ್ನು "ಆತ್ಮ"ವೆಂದು ಕರೆಯಲ್ಪಟ್ಟಿದೆ. (ಯೋಹಾನ 6:63 ; 1 ಯೋಹಾನ 5:7 ; ಎಫೆಸ 6:17) "ಸತ್ಯದ ಆತ್ಮನು" ಎಂದರೆ ಸಹಾಯಕನು. ಆತ್ಮನನ್ನು ವ್ಯಕ್ತೀಕರಿಸಿದೆ; ಅವರಿಗೆ ಆದರಣೆಯನ್ನು ಕೊಡುವುದರಲ್ಲಿ ಒಬ್ಬ ವ್ಯಕ್ತಿಯಂತಿರುತ್ತಾನೆ (ರೋಮಾಪುರ 8:14). ಅವರಿಗಾಗಿ ಮಾತಾಡಿದ್ದರಲ್ಲಿ ಒಬ್ಬ ವ್ಯಕ್ತಿಯಂತಿದ್ದಾನೆ (ಲೂಕ 21:19; ಅ. ಕೃ. 2:4); ಅವರಿಗೆ ಬೋಧಿಸಿದ್ದರಲ್ಲಿ (ಯೋಹಾನ 14:26); ಅವರು ಅದ್ಭುತ ಕಾರ್ಯಗಳನ್ನು ಮಾಡಲು ಶಕ್ತರಾಗುವಲ್ಲಿ–(ಅ.ಕೃ. 8:6)

ಯೇಸುವಿನಲ್ಲಿದ್ದಂತ ಆತ್ಮದ ಸ್ಪಷ್ಟ ಸಾಕ್ಷ್ಯಾಧಾರವನ್ನು ಕಾಣುವಲ್ಲಿ ಲೋಕವು ವಿಫಲಗೊಂಡಿತು. (ಯೋಹಾನ 5:36-38 ; 10:25-27). ಯೇಸುವಿನ ಶಿಷ್ಯರು ದೇವರು ತನ್ನ ಆತ್ಮನಿಂದ (ಶಕ್ತಿಯಿಂದ) ಕ್ರಿಸ್ತನಲ್ಲಿ ಕಾರ್ಯಾಚರಣೆಯನ್ನು ನಡೆಸಿದ್ದನ್ನು ಗ್ರಹಿಸಿದ್ದರು (ಮತ್ತಾಯ 16:16). "ಅನಾಥರಾಗಿ" ಬಿಡುವುದಿಲ್ಲ–ಇಲ್ಲ, ತನ್ನ ಗೈರುಹಾಜರಿಯಲ್ಲಿ ಅವರಿಗೆ ಸಹಾಯಕವಾಗಿರಲು ದೇವರ ವಿಶೇಷವಾದ ಶಕ್ತಿಯನ್ನು ಅವರಿಗೆ ಒದಗಿಸುವುದರ ಮೂಲಕ–ಅವರು "ಅನಾಥ"ರಾಗಿರುವುದಿಲ್ಲ.

"ಆದರೆ ತಂದೆಯ ಬಳಿಯಿಂದ ನಾನು ನಿಮಗೆ ಕಳುಹಿಸಿಕೊಡುವ ಸಹಾಯಕನು, ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯನ ಆತ್ಮನು, ಬಂದಾಗ ಆತನು ತನ್ನನ್ನು ಕುರಿತು ಸಾಕ್ಷಿ ಹೇಳುವನು. ನೀವು ಮೊದಲಿನಿಂದ ನನ್ನ ಸಂಗಡ ಇದ್ದಕಾರಣ ನೀವೂ ಸಾಕ್ಷಿಗಳಾಗಿದ್ದೀರಿ. (ಯೋಹಾನ 15:26-27).

ಪವಿತ್ರಾತ್ಮನು ಬರಬೇಕಾದಲ್ಲಿ ಮೊದಲು ಯೇಸುವು ಪರಲೋಕಕ್ಕೆ ಏರಿ ಹೋಗಬೇಕು. (ಯೋಹಾನ 7:39 ; 16:7 ; ಅ.ಕೃ. 2:33). ಸಹಾಯಕನನ್ನು ಮತ್ತೆ ವಿವರಿಸಿದೆ. ಅದು ಒಂದು ವ್ಯಕ್ತಿಯಲ್ಲ, ಆದರೆ ಆತನ ದೀಕ್ಷಾಸ್ನಾನದ ಸಮಯದಲ್ಲಿ ದೇವರಿಂದ ಆತನ ಮೇಲೆ ಇಳಿದ ಶಕ್ತಿಯೇ ಇದಾಗಿದೆ. (ಮತ್ತಾಯ 3:16 ; ಲೂಕ 3:22). ಅದು ದೇವರಿಂದ ಹೊರಟಿತೇ ಹೊರತು ಅದೇ ದೇವರಾಗಿರಲಿಲ್ಲ. ಶಿಷ್ಯರು ವಿವಿಧ ಭಾಷೆಗಳಲ್ಲಿ ಮಾತನಾಡಲು ಅದು [ಆ ಶಕ್ತಿಯು] ಸಹಾಯಕವಾದುದರಿಂದ ಮತ್ತು ಅವರಿಗೆ ಅದು ಒಂದು ವ್ಯಕ್ತಿಯಂತೆ ಇದ್ದುದರಿಂದ, ಆ ಶಕ್ತಿಯನ್ನು [ಪವಿತ್ರಾತ್ಮ] ವ್ಯಕ್ತೀಕರಿಸಿದೆ. [ಅ.ಕೃ. 2:3,4].

"ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ಕೇಳಿರಿ ; ನಾನು ಹೋಗುವುದು ನಿಮಗೆ ಹಿತಕರವಾಗಿದೆ ; ಹೇಗೆಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವುದಿಲ್ಲ; ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿ ಕೊಡುತ್ತೇನೆ ಆತನು ಬಂದು ಪಾಪ ನೀತಿ ನ್ಯಾಯ ತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು. ಅವರು ನನ್ನನ್ನು ನಂಬದೆ ಇರುವುದರಿಂದ ಪಾಪದ ವಿಷಯದಲ್ಲಿಯೂ ನಾನು ತಂದೆಯ ಬಳಿಗೆ ಹೋಗಿ ಇನ್ನುಮೇಲೆ ನಿಮಗೆ ಕಾಣಿಸದೆ ಇರುವುದರಿಂದ ನೀತಿಯ ವಿಷಯದಲ್ಲಿಯೂ ಇಹಲೋಕಾಧಿಪತಿಗೆ ನ್ಯಾಯ ತೀರ್ವಿಕೆಯಾದುದರಿಂದ ನ್ಯಾಯ ತೀರ್ವಿಕೆಯ ವಿಷಯದಲ್ಲಿಯೂ ಲೋಕಕ್ಕೆ ಅರುಹನ್ನು ಹುಟ್ಟಿಸುವನು."

ಆತ್ಮನ (Spirit) ಕಾರ್ಯವು ಕ್ರಿಸ್ತನ ಆರೋಹಣದಲ್ಲಿ ಪೂರೈಸುವತನಕ, ಪವಿತ್ರಾತ್ಮ ವರಗಳನ್ನು ಮಾನವರಿಗೆ ಕೊಡಲು ಸಾಧ್ಯವಿರಲಿಲ್ಲ. ಇದು ದೇವರ ನೀತಿಯನ್ವಯವಾಗಿದೆ. [ಎಫೆಸ 4:8-11 ; ಅ.ಕೃ. 2:33 ; ಕೀರ್ತನೆ 68;18] ಈ ಆತ್ಮನ ಶಕ್ತಿಯನ್ನು ವೈಯಕ್ತಿಕವಾಗಿ ಉಲ್ಲೇಖಿಸಿದೆ. ಯಾಕೆಂದರೆ ಅದು ಅವರಿಗೆ ಮಾರ್ಗದರ್ಶನ ಹಾಗೂ ಬೋಧನೆಯಲ್ಲಿ ಒಬ್ಬ ಸ್ನೇಹಿತನಂತೆ ಕಾರ್ಯ ನಡೆಸುತ್ತದೆ. ತನ್ನ ಆರೋಹಣದಿಂದ ತನ್ನ ಶಿಷ್ಯರಿಗಾಗುವ ಮನೋವೇದನೆಯನ್ನು ಅರಿತವನಾಗಿದ್ದರಿಂದ ಅದನ್ನು ಹಗುರಗೊಳಿಸುವುದು ಆತನ ಇಚ್ಛೆಯಾಗಿತ್ತು [ಲೂಕ 24:17-21] "ಆತನು ಬಂದು" – ಇದು ಅಕ್ಷರಶಃವಲ್ಲ ; ಆದರೆ ದೇವರ ಶಕ್ತಿಯಾಗಿದೆ. ಅದು ಅವರಿಗೆ ವಿವಿಧ ಭಾಷೆಗಳನ್ನಾಡುವ ಶಕ್ತಿಯನ್ನು ನೀಡಿತ್ತು. [ಅ. ಕೃ. 2:4] ಹೇಗೆಂದರೆ ಪ್ರವಾದಿಗಳಿಗೂ ಸಹ ಈ ರೀತಿಯಾಗಿ ದೇವರ ಶಕ್ತಿಯನ್ನು ನೀಡಲಾಗಿತ್ತು. [2 ಪೇತ್ರ 1:21]

"ಪಾಪ, ನೀತಿ, ನ್ಯಾಯತೀರ್ವಿಕೆ" [ವ.8] – ಈ ಮೂರು ವಿಷಯಗಳು ಅಪೋಸ್ತಲರ ಮೂಲಕ ಆತ್ಮನ ಸಾಕ್ಷಿಯ ಆಧಾರಗಳಾಗಿವೆ. ಪಂತೆಕೋಸ್ತ

ದಿನದಂದು ಅವರು ಮಾಡಿದ ಪ್ರಥಮ ಸಾರ್ವಜನಿಕ ಸಾರುವಿಕೆಯಲ್ಲಿ ಈ ಒಂದೊಂದನ್ನೂ ಸ್ಪಷ್ಟವಾಗಿ ನೋಡಬಹುದಾಗಿದೆ. [ಅ. ಕೃ. 2:14 ; ಯೋಹಾನ 15:26;14:16-18]

**ತ್ರಯೈಕತ್ವ (The Trinity) :**

ತ್ರಯೈಕತ್ವದ ಸಿದ್ಧಾಂತವು ತಂದೆಯಾದ ದೇವರು, ಮಗನಾದ ದೇವರು ಮತ್ತು ಪವಿತ್ರಾತ್ಮನಾದ ದೇವರು ಎಂಬ ಮೂರು ದೇವರುಗಳಿದ್ದಾರೆಂದು ಬೋಧಿಸುತ್ತದೆ; ಮತ್ತು ಈ ಮೂವರಲ್ಲಿ ಪ್ರತಿಯೊಬ್ಬರೂ ಸಹ ಸ್ವತಃ ದೇವರೇ ಆಗಿದ್ದು ಸರಿಸಮಾನರು ಹಾಗೂ ಸಹ-ನಿತ್ಯತ್ವ ಹೊಂದಿರುವವರೂ ಆಗಿದ್ದಾರೆಂದು ಬೋಧಿಸುತ್ತದೆ.

ಈ ಕೆಳಗಿನ ಕಾರಣಗಳಿಂದ ಈ ಬೋಧನೆಯು ತಪ್ಪಾಗಿರುತ್ತದೆ :

1] ಒಬ್ಬನೇ ದೇವರಿದ್ದಾನೆ ; ಮೂವರಲ್ಲ [1 ಕೊರಿಂಥ 8:6; ಧ. ಕಾ. 6:4; ಮಾರ್ಕ 12:29]

2] ಯೇಸುವು ದೇವರ ಮಗನಾಗಿದ್ದನು. [ಯೋಹಾನ 5:19,30;14:28; ಮಾರ್ಕ 12:32]. ಮಗನಾಗಿದ್ದಾನೆ [ಪ್ರಕಟಣೆ 1:1] ಮತ್ತು ಯಾವಾಗಲೂ ತಂದೆಗೆ ಅಧೀನನಾಗಿದ್ದಾನೆ [ಕೊರಿಂಥ 15:28].

3] ಯೇಸುವು "ಸ್ವತಃ ದೇವರಾಗಿದ್ದಲ್ಲಿ" ತನ್ನ ತಂದೆಯನ್ನು ಆತನು "ಒಬ್ಬನೇ ಸತ್ಯ ದೇವರು" ಎಂದು ಸಂಬೋಧಿಸುತ್ತಿದ್ದನೇ ? [ಯೋಹಾನ 17:3]. ಸಹ ನಿತ್ಯತ್ವ ಹೊಂದಿರುವ ಒಬ್ಬನು ಮತ್ತೊಬ್ಬ ಸಹ ನಿತ್ಯತ್ವವನ್ನು ಹೊಂದಿರುವವನನ್ನು "ಒಬ್ಬನೇ" ಸತ್ಯ ದೇವರು ಎಂದು ಹೇಳುತ್ತಾನೆಯೇ ? ಹಾಗೆ ಹೇಳಿದಲ್ಲಿ, ಸಹ-ಸಮಾನತೆ ಎಲ್ಲಿ ಇರುತ್ತದೆ?

3] ಅ. ಕೃ. 10:38 ರಲ್ಲಿ "ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು." ಎಂದು ನಾವು ಓದುತ್ತೇವೆ. ಮೊದಲನೇ ವ್ಯಕ್ತಿಯು ಎರಡನೇ ವ್ಯಕ್ತಿಗೆ ಶಕ್ತಿಯನ್ನು ಕೊಡಲು ಮೂರನೇ ವ್ಯಕ್ತಿಯಿಂದ ಅಭಿಷೇಕಿಸುವುದು ಹೇಗೆ ಸಾಧ್ಯ ?

5] ಯೇಸುವು ದೇವರಿಗೆ ಸರಿಸಮಾನನಾಗಿದ್ದಲ್ಲಿ, ಆತನು "ಜ್ಞಾನದಲ್ಲಿ ವೃದ್ಧಿಯಾದನು" [ಲೂಕ 2:52] ಹಾಗೂ ಆತನು ಅನುಭವಿಸಿದ ಬಾಧೆಗಳಿಂದ ಆತನನ್ನು ಪರಿಪೂರ್ಣತೆಗೆ (ಸಿದ್ಧಿಗೆ Perfection) ತರುವುದೆಂದರೆ ಹೇಗೆ ?

5] (ತಂದೆಗೆ ಹುಟ್ಟಿದಂತ) ಒಬ್ಬ ಮಗನು ತನ್ನ ತಂದೆಯೊಂದಿಗೆ ಎಂದಿಗೂ ಸಹ-ನಿತ್ಯತ್ವ ಹೊಂದಲು ಸಾಧ್ಯವಿಲ್ಲ. [ಮುಂದುವರೆಯುವುದು]

–ಭಾ. ಚಂದುದಾಸ್